ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ	: 1360
ಸದಸ್ಯರ ಹೆಸರು	: ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	: 09.03.2022
ಉತ್ತರಿಸುವ ಸಚಿವರು	: ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

(ಅ)	ರಾಜ್ಯದಲ್ಲಿ ಸಣ್ಣ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಗುರುತಿಸಿರುವ ಸ್ಥಳಗಳು ಯಾವುವು; ಅವುಗಳಲ್ಲಿ ಎಷ್ಟು ಸ್ಥಳಗಳಲ್ಲಿ ಈಗಾಗಲೇ ನಿಲ್ದಾಣ ಸ್ಥಾಪಿಸಲಾಗಿದೆ ಮತ್ತು ಉಳಿದ ವಿಮಾನ ನಿಲ್ದಾಣಗಳನ್ನು ಯಾವಾಗ ನಿರ್ಮಿಸಲಾಗುವುದು; (ಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಶಿವಮೊಗ್ಗ, ವಿಜಯಪುರ, ಹಾಸನ, ರಾಯಚೂರು, ಬಳ್ಳಾರಿ, ದಾವಣಗೆರೆ ಮತ್ತು ಕೊಪ್ಪಳ ದಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸಲಾಗಿದೆ. ಶಿವಮೊಗ್ಗ, ವಿಜಯಪುರ ಮತ್ತು ಹಾಸನ ವಿಮಾನ ನಿಲ್ದಾಣಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ರಾಯಚೂರು ವಿಮಾನ ನಿಲ್ದಾಣ ನಿರ್ಮಾಣದ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯ ನಂತರ ನಿರ್ಮಿಸಲು ಉದ್ದೇಶಿಸಿದೆ. ಬಳ್ಳಾರಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ (ಪಿಪಿಪಿ ಮಾದರಿಯಲ್ಲಿ) ಅಭಿವರ್ಧಕರನ್ನು ನೇಮಕ ಮಾಡಲಾಗಿದೆ. ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತಾ ವರದಿ ತಯಾರಿಸಲಾಗುತ್ತದೆ.
(ಆ)	ರಾಜ್ಯದಲ್ಲಿ ಈ ಪೈಕಿ ಭಾರತೀಯ ವಿಮಾನ ಪ್ರಾಧಿಕಾರದ (AAI) ಅಧೀನದಲ್ಲಿರುವ ವಿಮಾನ ನಿಲ್ದಾಣಗಳು ಮತ್ತು ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯ ಅಭಿವೃದ್ಧಿ ಅಧೀನದಲ್ಲಿರುವ ವಿಮಾನ ನಿಲ್ದಾಣಗಳೆಷ್ಟು;	ರಾಜ್ಯದಲ್ಲಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (AAI) ಅಧೀನದಲ್ಲಿರುವ ವಿಮಾನ ನಿಲ್ದಾಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ. 1) ಮೈಸೂರು 2) ಹುಬ್ಬಳ್ಳಿ 3) ಬೆಳಗಾವಿ 4) ಕಲಬುರಗಿ
(ಇ)	ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿರುವ ವಾಯುನೆಲೆ (Air strip) ಗಳೆಷ್ಟು; ಅವುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಒಟ್ಟು 8 ವಾಯುನೆಲೆಗಳಿರುತ್ತವೆ. ಅವುಗಳ ವಿವರ ಈ ಕೆಳಕಂಡತಿರುತ್ತದೆ. 1. ಬಲ್ಡೋಟಾ (ಕೊಪ್ಪಳ).- ಖಾಸಗಿ ವಾಯುನೆಲೆಯಾಗಿದ್ದು, ಸದರಿ ವಿಮಾನ ನಿಲ್ದಾಣವು ಎರಡನೇ ಸುತ್ತಿನ ಪ್ರಾದೇಶಿಕ ಸಂಪರ್ಕ ಯೋಜನೆಯಲ್ಲಿ ಆಯ್ಕೆಯಾಗಿರುತ್ತದೆ. ಕೊಪ್ಪಳದಲ್ಲಿರುವ M/s. MSPL ಖಾಸಗಿ ಸಂಸ್ಥೆಯ ಒಡೆತನದಲ್ಲಿರುವ ಬಲ್ಡೋಟಾ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸುವ ಕುರಿತು M/s. MSPL ಸಂಸ್ಥೆಯೊಂದಿಗೆ ಸರ್ಕಾರದ ವತಿಯಿಂದ ಹಲವಾರು ಪ್ರಯತ್ನಗಳನ್ನು ಮಾಡಿದ್ದರು ಸಹ, ಆರ್.ಸಿ.ಎಸ್ ವಿಮಾನಗಳ ಕಾರ್ಯಚಾರಣೆಗೆ M/s. MSPL ಸಂಸ್ಥೆಯಿಂದ ಸಕಾರತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ. 2. ಗಿಣಿಗೆರ (ಕೊಪ್ಪಳ) - ಸದರಿ ವಾಯುನೆಲೆಯು ಸುಮಾರು 35 ಎಕರೆ ಜಮೀನಿನಲ್ಲಿದ್ದು, ದಿನಾಂಕ: 18.03.2021 ರಂದು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಪರಿವೀಕ್ಷಣೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ವರದಿಯಂತೆ ಗಿಣಿಗೆರ ವಾಯುನೆಲೆ ವಿಸ್ತರಣೆಯನ್ನು ಕೈಗೊಳ್ಳಲು ಕಾರ್ಯಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ಕ್ರ ಸಂ	ಪ್ರಶ್ನೆ	ಉತ್ತರ
		3. ಭಾರತೀಯ ವಿಜ್ಞಾನ ಸಂಸ್ಥೆ, (ಬೆಂಗಳೂರು) – ಈ ವಾಯುನೆಲೆಯನ್ನು ಸಣ್ಣ ಡ್ರೋನ್‌ಗಳ ಪರೀಕ್ಷೆಗಳ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ. 4. ಜಕ್ಕೂರು (ಬೆಂಗಳೂರು) - ಈ ವಾಯುನೆಲೆಯು ರಾಜ್ಯ ಸರ್ಕಾರದ ಅಧೀನದಲ್ಲಿದ್ದು, ವಾಯು ತರಬೇತಿಗಾಗಿ ಉಪಯೋಗಿಸಲಾಗುತ್ತಿದೆ. 5. ಬಳ್ಳಾರಿ – ಬಳ್ಳಾರಿ ವಾಯುನೆಲೆಯು ರಕ್ಷಣಾ (Defence) ವಿಮಾನ ಇಳಿದಾಣವಾಗಿರುತ್ತದೆ. 6. ಚಿಕ್ಕಮಗಳೂರು – ಚಿಕ್ಕಮಗಳೂರಿನಲ್ಲಿ ಸುಮಾರು 100 ಎಕರೆ ಜಮೀನಿನಲ್ಲಿ ವಾಯುನೆಲೆಯನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ವಾಯುನೆಲೆಯಲ್ಲಿ ಸುಮಾರು 500 ಮೀ ಕಟ್ಟ ರನ್ವೇ ಇರುತ್ತದೆ. 7. ಹರಿಹರ – ಖಾಸಗಿ ವಾಯುನೆಲೆಯಾಗಿರುತ್ತದೆ. 8. ಕೋಲಾರ - ಕೋಲಾರ ವಾಯುನೆಲೆಯು ರಕ್ಷಣಾ (Defence) ವಿಮಾನ ಇಳಿದಾಣವಾಗಿರುತ್ತದೆ.
(ಈ)	ಮೂಲಭೂತ ಸೌಕರ್ಯ ಇಲಾಖೆ ಅಡಿಯಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆ ಸ್ಥಾಪಿಸಲಾಗುವ ಅಂತರ ರಾಷ್ಟ್ರೀಯ ಸಮಾವೇಶ ಕೇಂದ್ರ ಮತ್ತು ವ್ಯಾಪಾರ/ವಹಿವಾಟು ಕೇಂದ್ರಗಳು ಯಾವ ಹಂತದಲ್ಲಿದೆ; ಇವುಗಳು ಪೂರ್ಣಗೊಳ್ಳುವುದು ಯಾವಾಗ? (ಪೂರ್ಣ ಮಾಹಿತಿ ನೀಡುವುದು)	ರಾಜ್ಯ ಸರ್ಕಾರವು ಅಂತರಾಷ್ಟ್ರೀಯ ಸಮಾವೇಶ ಕೇಂದ್ರ ಮತ್ತು ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ಅನ್ನು ಅಭಿವೃದ್ಧಿಪಡಿಸಲು ದಿನಾಂಕ: 04/12/2017 ರಂದು ಆದೇಶವನ್ನು ಹೊರಡಿಸಿತ್ತು. ಸದರಿ ಆದೇಶದಂತೆ ಅಂತರಾಷ್ಟ್ರೀಯ ಸಮಾವೇಶ ಕೇಂದ್ರ (MICE- Meetings, Incentives, Conventions and Exhibitions) ವನ್ನು ಸುಮಾರು 35 ಎಕರೆ ಪ್ರದೇಶದಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಕೆಎಸ್‌ಐಐಡಿಸಿಯು 2018 ರಲ್ಲಿ ಟೆಂಡರ್ ಅನ್ನು ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಯಾವುದೇ ಅಭಿವೃದ್ಧಿದಾರರು ಭಾಗವಹಿಸಿರುವುದಿಲ್ಲ. ತದನಂತರ, ಬಿ.ಐ.ಎ.ಎಲ್ ಸಂಸ್ಥೆಯು ಈ ಯೋಜನೆಯನ್ನು ಕೈಗೆತ್ತಿಕೊಂಡಿರುವುದರಿಂದ ರಾಜ್ಯ ಸರ್ಕಾರವು ಈ ಯೋಜನೆಯನ್ನು ಕೈಬಿಡಲು ದಿನಾಂಕ: 10/02//2020 ರಂದು ಉನ್ನತಾಧಿಕಾರಿಗಳ ಸಮಿತಿ (Empowered Committee) ಸಭೆಯಲ್ಲಿ ನಿರ್ದರಿಸಲಾಗಿದೆ. ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ಅನ್ನು 407 ಎಕರೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು. ಮೂಲಸೌಕರ್ಯದ ಮೊದಲ ಹಂತದ (Trunk Infrastructure) ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಮೂಅಇ 33 ರಾಅವಿ 2022

(ವಿ. ಸೋಮಣ್ಣ)
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ,
ಸಚಿವರು